**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

**ಸಿ.ಸಿ ಸಂಖ್ಯೆಃ 270/2025**

**ಸಿ.ಡಬ್ಲ್ಯೂ -7, ಪಿ.ಡಬ್ಲ್ಯೂ -10**

| | | |
|---|---|---|
| **ಸಾಕ್ಷಿದಾರರ ಹೆಸರು** | **:** | **ಸಚಿನ್** |
| **ತಂದೆಯ ಹೆಸರು** | **:** | **ಮಹಾಬಲ** |
| **ವಯಸ್ಸು** | **:** | **29 ವರ್ಷ** |
| **ಉದ್ಯೋಗ** | **:** | **ವ್ಯವಸಾಯ** |
| **ವಾಸ** | **:** | **ಕರ್ಕಿಕೊಪ್ಪ ಗ್ರಾಮ, ಸಾಗರ ತಾಲ್ಲೂಕು.** |

**ಪ್ರಮಾಣೀಕರಿಸಿದ ದಿನಾಂಕ :30.06.2026.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಸುಮಾರು 3 ವರ್ಷಗಳ ಹಿಂದೆ ಪೊಲೀಸರು ಠಾಣೆಯಲ್ಲಿ ಯಾವುದೋ ದಾಖಲೆಯ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ 2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನ ಅಮಾನತ್ತು ಪಂಚನಾಮೆ ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ವಾಹನ ಅಮಾನತ್ತು ಪಂಚನಾಮೆಯನ್ನು ನಿಪಿ 29 ಎಂದು, ಸಾಕ್ಷಿಯ ಸಹಿಯನ್ನು ನಿಪಿ 29(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಛಾಯಾಚಿತ್ರಗಳಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, 2 ಛಾಯಾಚಿತ್ರಗಳನ್ನು ನಿಪಿ 30 ಮತ್ತು 31 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲುಃ- ಸ.ಸ.ಅ. ರವರಿಂದಃ-</u>

1. ಈಗ ಓದಿ ಹೇಳಿದ ನಿಪಿ 2 ಮತ್ತು 29 ರಂತೆ ಪೊಲೀಸರು ನನ್ನ ಸಮಕ್ಷಮ ಸ್ಥಳ ಪಂಚನಾಮೆ ಮತ್ತು ವಾಹನ ಅಮಾನತ್ತು ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.